# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 10-01-2024ರ ಬುಧವಾರ, ಪೂರ್ವಾಹ್ನ 11-30 ಗಂಟೆಗೆ ನಡೆದ "ವಿಶೇಷ ಸಿಂಡಿಕೇಟ್ ಸಭೆ"ಯ ನಡವಳಿ.

**ಉಪಸ್ಥಿತರು:**

| | | |
|---|---|---|
| 1. | ಪ್ರೊ. ಎನ್.ಕೆ. ಲೋಕನಾಥ್ | ಕುಲಪತಿ ಹಾಗೂ ಅಧ್ಯಕ್ಷರು |
| 2. | ಪ್ರೊ. ಸೋನರ್ ನಂದಪ್ಪ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಮಾ.ಗಂ.,ಮೈ | ಸದಸ್ಯರು |
| 3. | ಪ್ರೊ. ಟಿ.ಆರ್. ಮಾರುತಿ, ಡೀನರು, ಕಾನೂನು ನಿಕಾಯ,ಮಾ.ಗಂ.ಮೈ. | ಸದಸ್ಯರು |
| 4. | ಡಾ. ಟಿ.ಆರ್. ಚಂದ್ರಶೇಖರ್, ಬಿ.ಇ., ಎಂಐಇ., ಎಂ.ಎ., ಪಿಎಚ್.ಡಿ., | ಸದಸ್ಯರು |
| 5. | ಶ್ರೀ ಗೋಕುಲ್ ಗೋವರ್ಧನ್, ಎಲ್ಎಲ್‌ಬಿ., ಎಂ.ಬಿ.ಎ., | ಸದಸ್ಯರು |
| 6. | ಶ್ರೀಮತಿ ಸೌಮ್ಯ ಈರಪ್ಪ ಕೆ. | ಸದಸ್ಯರು |
| 7. | ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ | ಸದಸ್ಯರು |
| 8. | ಡಾ. ಗಣೇಶ್ .ಕೆ | ಸದಸ್ಯರು |
| 9. | ಡಾ. ಮುಜ್ಹೀದ ಬಾನು | ಸದಸ್ಯರು |
| 10. | ಶ್ರೀ ಮಹದೇಶು | ಸದಸ್ಯರು |
| 11. | ಶ್ರೀ ನಾಗರಾಜು ಸಿ. | ಸದಸ್ಯರು |
| 12. | ಡಾ. ಬಸವರಾಜು ಸಿ. | ಸದಸ್ಯರು |
| 13. | ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಫಾ | ಸದಸ್ಯರು |
| 14. | ಡಾ. ಶಿಲ್ಪ. ಜೆ | ಸದಸ್ಯರು |
| 15. | ಶ್ರೀ ನಟರಾಜು ಹೆಚ್.ಎಸ್. | ಸದಸ್ಯರು |
| 16. | ಪ್ರೊ. ಕೆ.ಎಂ. ಮಹದೇವನ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 17. | ಶ್ರೀಮತಿ ವಿ.ಆರ್. ಶೈಲಜ, ಕೆಎಎಸ್ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |
| 18. | ಶ್ರೀಮತಿ ರೇಖಾ ಕೆ.ಎಸ್., ಕೆಎಸ್ಎಎಸ್, ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |

**ಅನುಪಸ್ಥಿತರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪರವಾಗಿ
   ಪ್ರೊ. ಎ.ಹೆಚ್.ಎಂ. ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು
   ಕಾಲೇಜು ಶಿಕ್ಷಣ ಇಲಾಖೆ
2. ಶ್ರೀ ಸುರೇಶ್. ಕೆಎಎಸ್
   ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮೊದಲಿಗೆ, ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡಿರುವ ಶ್ರೀ ಮಹದೇಶು, ಶ್ರೀ ನಾಗರಾಜು ಸಿ, ಡಾ. ಬಸವರಾಜು ಸಿ, ಪ್ರೊ. ಶಬ್ಬೀರ್ ಮೊಹಮ್ಮದ್ ಮುಸ್ತಫಾ, ಡಾ. ಶಿಲ್ಪ. ಜೆ ಮತ್ತು ಶ್ರೀ ನಟರಾಜು ಹೆಚ್. ಎಸ್, ಇವರನ್ನು ಪರಿಚಯಿಸಿ ಸಭೆಗೆ ಸ್ವಾಗತಿಸಲಾಯಿತು.

ಮಾನ್ಯ ಕುಲಪತಿಗಳು ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರುಗಳನ್ನು ಮತ್ತೊಮ್ಮೆ ಸ್ವಾಗತಿಸಿದರು. ಮುಂದುವರೆದು ಕಾರ್ಯಸೂಚಿಯಲ್ಲಿ ಸೂಚಿಸಿರುವ ವಿಷಯಗಳಿಗೆ ತುರ್ತಾಗಿ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಇಂದಿನ ವಿಶೇಷ ಸಭೆಯನ್ನು ಕರೆಯಲಾಗಿದ್ದು, ಸದಸ್ಯರು ತಮ್ಮ ಸಲಹೆ ಹಾಗೂ ಅಭಿಪ್ರಾಯಗಳನ್ನು ನೀಡಬೇಕೆಂದು ಕೋರಿದರು.

ಮಾನ್ಯ ಕುಲಪತಿಗಳ ಅನುಮತಿ ಮೇರೆಗೆ ಕುಲಸಚಿವರು ಕಾರ್ಯಸೂಚಿಯನ್ನು ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಶೇಷ ಸಭೆ 2024/Spl.1 | ಶ್ರೀ ಶಿವಕುಮಾರ್.ಜೆ., ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರು ಕಾಲೇಜಿನ ಆವರಣದಲ್ಲಿ ಆತ್ಮಹತ್ಯೆ ಪತ್ರವನ್ನು ಬರೆದಿಟ್ಟು ನಿದ್ರೆ ಮಾತ್ರೆಗಳನ್ನು ತೆಗೆದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿರುವ ಪ್ರಕರಣದ ಬಗೆಗೆ. |

ಕುಲಸಚಿವರು ಸದರಿ ಕಾರ್ಯಸೂಚಿಗೆ ಸಂಬಂಧಿಸಿದಂತೆ ವಿವರಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದರು.

ಶ್ರೀ ನಾಗರಾಜು .ಸಿ ಮಾತನಾಡಿ, ದಿನಾಂಕ: 03-01-2024ರ ಮುಂಚಿತವಾಗಿ ಪ್ರಾಂಶುಪಾಲರು ತೊಂದರೆ ನೀಡುತ್ತಿದ್ದಾರೆಂದು ಶ್ರೀ ಶಿವಕುಮಾರ್ ಅವರು ಗಮನಕ್ಕೆ ತಂದಿದ್ದಾರೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನನ್ನ ಗಮನಕ್ಕೆ ಯಾರು ತಂದಿರುವುದಿಲ್ಲ. ದಿನಾಂಕ : 3.1.2024ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆ ಮುಗಿದ ನಂತರ ಅಪರಾಹ್ನದಂದು ಗಮನಕ್ಕೆ ತರಲಾಯಿತು. ಅದಕ್ಕೂ ಮುಂಚೆ ಯಾರು ಗಮನಕ್ಕೆ ತಂದಿರುವುದಿಲ್ಲವೆಂದರು.

ಶ್ರೀ ನಟರಾಜು.ಹೆಚ್.ಎಸ್ ಅವರು ಮಾತನಾಡಿ, ಹಿಂದೆ ಏನಾದರೂ ಕಾಲೇಜಿನ ನೌಕರರು ವಾಸ್ತವವಾಗಿ ಪ್ರಾಂಶುಪಾಲರಿಂದ ಈ ರೀತಿಯ ತೊಂದರೆಯಾಗುತ್ತಿದೆ ಎಂದು ಮನವಿಯನ್ನು ಸಲ್ಲಿಸಿದ್ದಾರೆಯೇ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಈ ಘಟನೆ ನಡೆದ ನಂತರ ಮನವಿಯನ್ನು ಸಲ್ಲಿಸಿರುತ್ತಾರೆ ಹೊರತು ಮುಂಚಿತವಾಗಿ ಯಾವುದೇ ಮನವಿಯನ್ನು ಸಲ್ಲಿಸಿರುವುದಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಯುವರಾಜ ಕಾಲೇಜಿನ ಅಧ್ಯಾಪಕರುಗಳು ಹಾಗೂ ಅಧ್ಯಾಪಕೇತರ ಉದ್ಯೋಗಿಗಳು ಪ್ರಾಂಶುಪಾಲರಿಗೆ ವಿರುದ್ಧ ಮೌಖಿಕವಾಗಿ ದೂರಿರುತ್ತಾರೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ, ಪ್ರಾಂಶುಪಾಲರಾಗಿ ನೇಮಕಾತಿಯಾದ ದಿನಾಂಕ: 16-11-2022 ರಂದು ನಡೆದಂತಹ ಘಟನೆಯ ಮುಂಚೆ ಪ್ರಾಂಶುಪಾಲರ ವಿರುದ್ಧ ಯಾವುದಾದರೂ ದೂರುಗಳು ಬಂದಿದೆಯೇ, ಅಧಿಕಾರೇತರ ಹಾಗೂ ಅಧಿಕಾರಿ ಸಿಬ್ಬಂದಿಗಳು ದೂರು ನೀಡಿರುವ ವಿಷಯವು ದಿನಪತ್ರಿಕೆಯಲ್ಲಿ ಪ್ರಕಟವಾಗಿರುವುದು ತಿಳಿದು ಬಂದಿದೆ. ಈ ವಿಷಯವು ಯಾವುದೆಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, 45 ಉದ್ಯೋಗಿಗಳಿಗೆ 05 ತಿಂಗಳುಗಳಿಂದ ವೇತನ ಪಾವತಿಸಿರುವುದಿಲ್ಲವೆಂದು ದಿನಪತ್ರಿಕೆಯಲ್ಲಿ ವರದಿಯಾಗಿತ್ತು. ಯುವರಾಜ ಕಾಲೇಜು ಆಡಳಿತ ಮಂಡಳಿ ಸಭೆಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿ ವೇತನವನ್ನು ಪಾವತಿಸಲಾಯಿತು ಹಾಗೂ ವೇತನ ಪಾವತಿಸಿಲ್ಲದ ಕಾರಣದಿಂದ ಕಾಲೇಜಿನ ಉದ್ಯೋಗಿಗಳು ವಿರುದ್ಧವಾಗಿದ್ದಾರೆಂದು ಪ್ರಾಂಶುಪಾಲರು ಪತ್ರದಲ್ಲಿ ತಿಳಿಸಿರುತ್ತಾರೆಂದು ಸ್ಪಷ್ಟನೆ ನೀಡಿದರು.

ಶ್ರೀ ನಟರಾಜು .ಹೆಚ್.ಎಸ್. ಮಾತನಾಡಿ, ಕೇವಲ ಶಿವಕುಮಾರ್.ಜೆ ಒಬ್ಬರೇ ಈ ಆರೋಪವನ್ನು ಹೊರಿಸಿರುವುದಿಲ್ಲ. ಒಟ್ಟಾರೆ ಸಿಬ್ಬಂದಿ ವರ್ಗದವರು ಹಾಗೂ ಅತಿಥಿ ಉಪನ್ಯಾಸಕರುಗಳು ಸಹ ದೂರುಗಳನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಯುವರಾಜ ಕಾಲೇಜಿನ ಅಧ್ಯಾಪಕರು ಹಾಗೂ ಅಧ್ಯಾಪಕೇತರ ಉದ್ಯೋಗಿಗಳು ಮನವಿ ಪತ್ರ ಸಲ್ಲಿಸಿದ್ದು, ಪ್ರಾಂಶುಪಾಲರು ಬಳಸುವ ಭಾಷೆ ಸರಿಯಾಗಿರುವುದಿಲ್ಲವೆಂದು ಯುವರಾಜ ಕಾಲೇಜಿನ ಸಿಬ್ಬಂದಿಗಳೆಲ್ಲರು ಒಕ್ಕೊರಲಿನಿಂದ ಪ್ರಾಂಶುಪಾಲರ ವಿರುದ್ಧ ಕ್ರಮ ಜರುಗಿಸಬೇಕೆಂದು ತಿಳಿಸಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ನಾಗರಾಜು .ಸಿ ಅವರು ಮಾತನಾಡಿ, ಕರ್ತವ್ಯ ಸಂಘರ್ಷ ನಡೆಯುತ್ತಿದೆಯೇ? ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಶಿವಕುಮಾರ್.ಜೆ ಅವರು ಮೆಡಿಷನ್ ತೆಗೆದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ. ಅಂದರೆ ಎಷ್ಟು ತಿಂಗಳಿನಿಂದ ತೊಂದರೆ ಅನುಭವಿಸಿದ್ದಾರೆ ಎಂಬ ಸತ್ಯಸತ್ಯಾತೆಯನ್ನು ಪರಿಶೀಲಿಸಬೇಕು. ಇಂತಹ ವಿಷಯಗಳು ಪತ್ರಿಕೆಗಳಲ್ಲಿ "ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರಿಂದ ಹಲ್ಲೆ"ಯೆಂದು ಪ್ರಕಟವಾಗುತ್ತದೆ. ಇದರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪಾತ್ರವೇನಿರುವುದಿಲ್ಲ, ಆದರೂ ವಿಶ್ವವಿದ್ಯಾನಿಲಯವನ್ನು ಹೊಣೆಗಾರರನ್ನಾಗಿ ಮಾಡುತ್ತಾರೆ. ಶಿವಕುಮಾರ್.ಜೆ Death Note ಬರೆದಿದ್ದಾರೆ ಹಾಗೂ ಎಫ್ಐಆರ್ ಸಹ ಆಗಿರುವ ಹಿನ್ನೆಲೆಯಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕೆಂದು ಸಿಂಡಿಕೇಟಿನ ವಿಶೇಷ ಸಭೆಯನ್ನು ಕರೆಯಲಾಗಿದೆ ಎಂದರು.

ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ ಅವರು ಮಾತನಾಡಿ, ಈ ಘಟನೆ ನಡೆದ ನಂತರ ಸುಮಾರು ಬೆಳವಣಿಗೆಗಳಾಗಿವೆ. ಸಾಕಷ್ಟು ಕಿರುಕುಳ ಕೊಟ್ಟಿದ್ದರೆ ಮಾತ್ರ ಇಂತಹ ನಿರ್ಣಯವನ್ನು ತೆಗೆದುಕೊಳ್ಳಲು ಸಾಧ್ಯ. ಆದರೆ ಈ ಘಟನೆ ನಡೆಯುವ ಮುನ್ನ ವಿಶ್ವವಿದ್ಯಾನಿಲಯಕ್ಕೆ ಯಾವುದೇ ದೂರನ್ನು ಅವರು ಸಲ್ಲಿಸಿರುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ನಿರ್ಣಯಿಸುವುದು ಸೂಕ್ತ. ಶಿವಕುಮಾರ್.ಜೆ ಅವರು Death Note ಅನ್ನು ಅವರೇ ಬರೆದಿದ್ದಾರೆ. ಸಾಮಾನ್ಯವಾಗಿ ನಾನು ಸಾಹಿತ್ಯಕ ವಿದ್ಯಾರ್ಥಿಯಾಗಿರುವುದರಿಂದ ಗಮನಿಸುವುದೇನೆಂದರೆ, ನಾನು ಇಂತಹ ಸ್ಥಿತಿಯಲ್ಲಿದ್ದೇನೆ ಹಾಗೂ ಈ ರೀತಿಯ ಕಿರುಕುಳವಾಗಿದೆಯೆಂದು Death Note ನಲ್ಲಿ ಅವರ ಸ್ಥಿತಿ ಬಗ್ಗೆ ಮೊದಲು ವಿವರಣೆ ಇರುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾಂಶುಪಾಲರು ಶಿವಕುಮಾರ್ .ಜೆ ಅವರಿಗೆ ಒಂದು ನೋಟಿಸ್ ಜಾರಿಗೊಳಿಸುತ್ತಾರೆ. ತದನಂತರ, ನೋಟಿಸ್ ಅನ್ನು ಹಿಂಪಡೆಯಲಾಗಿದೆಯೆಂದು ತಿಳಿಸಿದ್ದಾರೆ. ಒಂದು ನೋಟಿಸ್ ನೀಡುವ ಮುನ್ನ ಯೋಚನೆ ಮಾಡಬೇಕು ಎಂದರು.

ಶ್ರೀ ನಾಗರಾಜು.ಸಿ ಅವರು ಮಾತನಾಡಿ, ಎಷ್ಟು ನೋಟಿಸ್‌ಗಳನ್ನು ಜಾರಿ ಮಾಡಿರುತ್ತಾರೆಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಎರಡು ನೋಟಿಸ್‌ಗಳನ್ನು ಜಾರಿಗೊಳಿಸಿದ್ದಾರೆ. ಒಂದು ನೋಟಿಸ್ ಜಾರಿಗೊಳಿಸಿದ ನಂತರ ಇನ್ನೊಂದು ನೋಟಿಸ್ ನೀಡಿ ಹಿಂಪಡೆಯಲಾಗಿದೆಯೆಂದು ತಿಳಿಸಿರುತ್ತಾರೆ.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನೋಟಿಸ್ ಹಿಂಪಡೆಯುವುದಕ್ಕೆ ಕಾರಣವೇನೆಂದು ತಿಳಿಸಿರುವುದಿಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಯಾವ ಕಾರಣಗಳನ್ನು ನೀಡಿರುವುದಿಲ್ಲ. ಹಾಗೆಯೇ ಪೂರಕವಾದ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಪ್ರಾಂಶುಪಾಲರ ವರದಿಯನ್ನು ಗಮನಿಸಿದ್ದರೆ ಸುಮಾರು ವ್ಯಾಕರಣಗಳು ತಪ್ಪಾಗಿರುವುದು ಕಂಡುಬಂದಿದೆ. ಪ್ರಾಂಶುಪಾಲರು ಇವುಗಳನ್ನು ಗಮನಿಸಿ ವಿಶ್ವವಿದ್ಯಾನಿಲಯಕ್ಕೆ ವರದಿಯನ್ನು ಕಳುಹಿಸುವುದು ಸೂಕ್ತ. ಏಕೆಂದರೆ ಈ ವರದಿಗಳು ವಿಶ್ವವಿದ್ಯಾನಿಲಯದಲ್ಲಿ ದಾಖಲೆಗಳಾಗಿರುತ್ತದೆ.

ಶ್ರೀ ಮಹದೇಶು ಅವರು ಮಾತನಾಡಿ, ನೈಜತೆಯಾಗಿ ತಿಳಿಸುವುದಾದರೆ 100 ನಿದ್ರೆ ಮಾತ್ರೆಗಳನ್ನು ತೆಗೆದುಕೊಂಡು ಯಾರೂ ಬದುಕುವುದು ಸಾಧ್ಯವಿಲ್ಲ. ಪ್ರಾಂಶುಪಾಲರು 02 ನೋಟಿಸ್‌ಗಳನ್ನು ಜಾರಿ ಮಾಡಿರುವುದು ತಿಳಿದುಬಂದಿದೆ. ಇವರೊಬ್ಬರಿಗೆ ಮಾತ್ರ ನೋಟಿಸ್ ಜಾರಿಗೊಳಿಸಿರುವುದನ್ನು ಗಮನಿಸಿದರೆ ಶಿವಕುಮಾರ್.ಜೆ ಕಛೇರಿ ಹಣ ದುರುಪಯೋಗ ಪಡಿಸಿಕೊಂಡಿರುವ ಅವಕಾಶವು ಇರಬಹುದು. ಕಾರಣ ಕೇಳುವುದು ಪ್ರಾಂಶುಪಾಲರ ಕರ್ತವ್ಯವಾಗಿರುತ್ತದೆ. ಇದನ್ನೆ ಮಾನದಂಡವನ್ನಾಗಿ ಮಾಡಿಕೊಂಡು ಏಕೆ ಆತ್ಮಹತ್ಯೆಗೆ ಪ್ರಯತ್ನಿಸಬಾರದು ಅಥವಾ ವೈಯಕ್ತಿಕ ಸಂಘರ್ಷಗಳು ಇರಬಹುದು ಎಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವೈದ್ಯಕೀಯ ವರದಿಯಲ್ಲಿ ಏನಿರಬಹುದೆಂದು ಕೇಳಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಶಿವಕುಮಾರ್.ಜೆ ಇವರು ಮಾತ್ರೆಗಳನ್ನು ಸೇವಿಸಿದ ತಕ್ಷಣ ಸಹೋದ್ಯೋಗಿಯು ಆಸ್ಪತ್ರೆಗೆ ಕೂಡಲೇ ದಾಖಲಿಸಿರುವುದು ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಪ್ರಾಣಕ್ಕೆ ಯಾವ ಅಪಾಯವು ಸಂಭವಿಸಿಲ್ಲ. ಒಂದು ವೇಳೆ ಮಾತ್ರೆಗಳನ್ನು ಸೇವಿಸಿ 2-3 ಗಂಟೆಗಳಾಗಿದ್ದರೆ, ಪ್ರಾಣಕ್ಕೆ ಅಪಾಯವಾಗುತ್ತಿತ್ತು ಎಂದು ತಿಳಿಸಿದರು.

ಡಾ. ಶಿಲ್ಪ ಜೆ. ಅವರು ಮಾತನಾಡಿ, ಮಾತ್ರೆಗಳನ್ನು ಸೇವಿಸಿದ ತಕ್ಷಣವೇ ಗಮನಿಸಿ ಆಸ್ಪತ್ರೆಗೆ ದಾಖಲಿಸಿರುವುದರಿಂದ, ಪ್ರಾಣಕ್ಕೆ ಯಾವುದೇ ಅಪಾಯವಾಗಿರುವುದಿಲ್ಲ. ಒಂದು ವೇಳೆ ಮಾತ್ರೆಗಳ ಅಂಶವು ರಕ್ತದಲ್ಲಿ ಸೇರ್ಪಡೆಯಾಗಿದ್ದಲ್ಲಿ ಜೀವಕ್ಕೆ ಅಪಾಯವಾಗುತ್ತಿತ್ತು ಎಂದು ತಿಳಿಸಿದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟ್ ಸದಸ್ಯರಾಗಿ ದಿನಾಂಕ: 05-01-2024 ರಂದು ವರದಿ ಮಾಡಿಕೊಂಡಿರುತ್ತೇನೆ. ಇದುವರೆವಿಗೂ 50 ಮಂದಿಯಾದರೂ ಶಿವಕುಮಾರ್.ಜೆ ಆತ್ಮಹತ್ಯೆಗೆ ಸಂಬಂಧಿಸಿದಂತೆ ನನ್ನ ಬಳಿ ಚರ್ಚಿಸಿರುತ್ತಾರೆ. ಪ್ರಾಂಶುಪಾಲರು ಕಿರುಕುಳ ನೀಡಿರುತ್ತಾರೆಂದು ಒಟ್ಟಾರೆ ಎಲ್ಲರೂ ತಿಳಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯವು 100 ವರ್ಷಗಳ ಇತಿಹಾಸವಿರುವ ವಿಶ್ವವಿದ್ಯಾನಿಲಯವಾಗಿದ್ದು, ವಿಶ್ವವಿದ್ಯಾನಿಲಯದ ಉದ್ಯೋಗಿಯು ಆತ್ಮಹತ್ಯೆಗೆ ಪ್ರಯತ್ನಿಸಿರುವುದಕ್ಕೆ ವಿಶ್ವವಿದ್ಯಾನಿಲಯವು ತೆಗೆದುಕೊಂಡಿರುವ ತೀರ್ಮಾನವೇನೆಂದು ಯಕ್ಷಪ್ರಶ್ನೆಯಾಗಿದೆ. ಮೇಲ್ನೋಟಕ್ಕೆ ಪ್ರಾಂಶುಪಾಲರು ತಪ್ಪಿತಸ್ಥರೆಂದು ಕಂಡು ಬರುತ್ತಿದೆ. ಆದರೆ ಯಾವುದೇ ವಿಷಯವನ್ನು ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡಬೇಕು. ಈ ಸಂಬಂಧ ಸಮಿತಿಯನ್ನು ರಚನೆ ಮಾಡಿ, ಸಮಿತಿಯ ಶಿಫಾರಸ್ಸಿನನ್ವಯ ಕ್ರಮವಹಿಸುವುದು ಸೂಕ್ತವೆಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಹಿಂದೆ ಪೋಲೀಸ್ ಸ್ಟೇಷನ್‌ನಲ್ಲಿ ಅಧಿಕಾರಿ ಮೇಲೆ ಎಫ್‌ಐಆರ್ ಆದಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ನಿಯಮಗಳ ಪ್ರಕಾರ ಯಾವ ಕ್ರಮವನ್ನು ಪಾಲಿಸಲಾಗುತ್ತದೆ ಎಂದು ಪ್ರಶ್ನಿಸಿದರು.

ಕುಲಸಚಿವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆಯನ್ವಯ ಪಾಲನೆ ಮಾಡಲಾಗಿದೆ ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ, ಪ್ರಾಂಶುಪಾಲರ ಮೇಲೆ ಎಫ್‌ಐಆರ್ ದಾಖಲಾಗಿದೆ. ಎಫ್‌ಐಆರ್ ಆದ ಮೇಲೆ ಪೋಲೀಸ್ ಸ್ಟೇಷನ್‌ನಿಂದ ತನಿಖೆಯಾಗುತ್ತದೆ. ಸಿಂಡಿಕೇಟ್ ಸಭೆಯಲ್ಲಿ ಒಂದು ನಿರ್ಧಾರ ತೆಗೆದುಕೊಳ್ಳುತ್ತೇವೆ. ಒಂದು ವೇಳೆ ಸಿಂಡಿಕೇಟ್ ಸಭೆಯ ನಿರ್ಧಾರದ ತದ್ವಿರುದ್ಧ ಪೋಲೀಸ್ ಸ್ಟೇಷನ್‌ನಿಂದ ವರದಿ ಬಂದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ನೀಡುವ ಉತ್ತರವೇನೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಪೋಲೀಸ್ ಸ್ಟೇಷನ್‌ನಿಂದ ತನಿಖೆ ಮಾಡಿ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವು ಬದ್ಧರಾಗಿ ಕ್ರಮ ಜರುಗಿಸಬೇಕಾಗುತ್ತದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಪ್ರಸ್ತುತ ಯುವರಾಜ ಕಾಲೇಜಿನ ಪ್ರಾಂಶುಪಾಲರು ಪ್ರಭಾರ ಹುದ್ದೆಯಲ್ಲಿದ್ದಾರೆ. ಪ್ರಾಂಶುಪಾಲರ ಮೇಲೆ ಆರೋಪ ಮಾಡಲಾಗಿದೆ. ಅವರು ಸಮಜಾಯಿಷಿ ನೀಡುವುದನ್ನು ಗಮನಿಸಿದರೆ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿರುವುದಾಗಿದೆ. ಶಿವಕುಮಾರ್.ಜೆ ಅವರು ಆತ್ಮಹತ್ಯೆಗೆ ಪ್ರಯತ್ನಿಸಿದ್ದರೆಂದು ಮಾನವೀಯತೆ ದೃಷ್ಟಿಯಿಂದ ನೋಡುವುದಾದರೆ, ಹಾಗೂ ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಗಮನಿಸುವುದಾದರೆ ತಪ್ಪು ಮಾಡಿದ್ದನ್ನು ಮುಚ್ಚಿ ಹಾಕುವುದಕ್ಕೆ ಆತ್ಮಹತ್ಯೆಗೆ ಪ್ರಯತ್ನಿಸಿರಬಹುದು ಎನಿಸುತ್ತದೆ. ಸಂಪೂರ್ಣ ವಿಚಾರಣೆ ಮಾಡಬೇಕು. ನಿವೃತ್ತ ಪೋಲೀಸ್ ಅಧಿಕಾರಿ ಅಥವಾ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ಮಾಡಿಸಬೇಕು. ಪ್ರಾಂಶುಪಾಲರ ಹುದ್ದೆಯಲ್ಲೇ ಇದ್ದು ತನಿಖೆ ನಡೆಸುವುದಕ್ಕೆ ಸಹಕಾರ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ನಿಷ್ಪಕ್ಷಪಾತವಾಗಿ ತನಿಖೆ ಮಾಡುವುದಕ್ಕೆ ಆಸ್ಪದವಾಗುವುದಿಲ್ಲ. ಪ್ರಾಂಶುಪಾಲರನ್ನು ತಾತ್ಕಾಲಿಕವಾಗಿ ಬೇರೆ ಕಡೆಗೆ ನಿಯೋಜನೆ ಮಾಡುತ್ತೀರೋ ಎಂದು ಕೇಳುತ್ತಾ, ಪ್ರಸ್ತುತ ಅಮಾನತು ಎನ್ನುವುದು ಸರ್ವೇ ಸಾಮಾನ್ಯವಾಗಿದೆ. ಅಮಾನತು ಮಾಡಿದ ನಂತರ

ತನಿಖೆಯಲ್ಲಿ ತಪ್ಪಿರುವುದಿಲ್ಲವೆಂದು ವರದಿ ಬಂದಾಗ ಅಮಾನತು ಮಾಡಿರುವ ಆದೇಶವನ್ನು ಹಿಂಪಡೆಯಲಾಗುವುದು. ಆದರೆ ಸೇವಾ ಪುಸ್ತಕದಲ್ಲಿ ಇಂತಹ ಅವಧಿಯಲ್ಲಿ ಅಮಾನತು ಮಾಡಲಾಗಿದೆಯೆಂದು ದಾಖಲು ಮಾಡಲಾಗಿರುತ್ತದೆ. ಇದರ ಬದಲು ಒಂದು ಸಂಪೂರ್ಣ ತನಿಖೆ ನಡೆಸಿದ ನಂತರ ಅಮಾನತು ಮಾಡುವುದೋ ಅಥವಾ ಬೇಡವೋ ಎಂಬುದನ್ನು ಕ್ರಮ ತೆಗೆದುಕೊಂಡರೆ ಸೂಕ್ತವೆಂದರು. ಸದ್ಯಕ್ಕೆ ಪ್ರಾಂಶುಪಾಲರ ಹುದ್ದೆಯಿಂದ ವಿಮುಕ್ತಿಗೊಳಿಸಿ, ಶಿವಕುಮಾರ್.ಜೆ ಮೇಲೂ ತನಿಖೆ ಮಾಡಬೇಕು. ಏಕೆಂದರೆ ಶಿವಕುಮಾರ್.ಜೆ ಇವರಿಗೆ ಎರಡು ನೋಟಿಸ್‌ಗಳನ್ನು ಜಾರಿಗೊಳಿಸಲಾಗಿದೆ. ನಿಜಕ್ಕೂ ಆ ನೋಟಿಸ್ ಕಿರುಕುಳ ನೀಡುವ ನೋಟಿಸ್ ಆಗಿದ್ದರೆ, ಮಾನ್ಯ ಕುಲಪತಿಗಳ ಅಥವಾ ಕುಲಸಚಿವರ ಗಮನಕ್ಕೆ ತರಬಹುದಾಗಿತ್ತು. ಈ ಸಂದರ್ಭದಲ್ಲಿ ಎರಡು ನೋಟಿಸ್‌ಗಳನ್ನು ಪಡೆದ ನಂತರ ಮೌಖಿಕವಾಗಿ ತಿಳಿಸಿರುತ್ತೇನೆಂದು ಸಮಜಾಯಿಷಿ ನೀಡಿದ್ದಾರೆ. ಇಬ್ಬರ ನಡುವೆ ನಡೆದಿರುವ ಒಟ್ಟಾರೆ ಘಟನೆಗಳನ್ನು ಸಮಗ್ರವಾಗಿ ಹೊರತರಬೇಕು. ಈ ಸಂಬಂಧ ಮೂರನೇ ವ್ಯಕ್ತಿಯ ವಿಚಾರಣೆ ನಡೆಸಿದರೆ ಸೂಕ್ತವೆಂದು ಅಭಿಪ್ರಾಯಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ, ಶ್ರೀ ಗೋಕುಲ್ ಗೋವರ್ಧನ್ ಅವರು ಪ್ರಸ್ತಾಪಿಸಿರುವ ಅಂಶವು ಶೇ.100 ರಷ್ಟು ಸತ್ಯವಾಗಿದೆಯೆಂದರು.

ಶ್ರೀ ನಟರಾಜು .ಹೆಚ್.ಎಸ್. ಅವರು ಮಾತನಾಡಿ. ಸಭೆಯಲ್ಲಿ ಯಾವುದೇ ರೀತಿಯ ತೀರ್ಮಾನವಾಗದಿದ್ದ ಸಂದರ್ಭಧಲ್ಲಿ ಮಾತ್ರ ಸಮಿತಿ ರಚಿಸಬೇಕು. ವಿಶ್ರಾಂತ ಪ್ರಾಂಶುಪಾಲರಾದ ಡಾ. ಯಶೋಧ ಅವರು ಸಹ ಬೇರೆ ಬೇರೆ ಆರೋಪಗಳನ್ನು ಮಾಡಿದ್ದರೆಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿದರು. ಒಟ್ಟಾರೆ ಸಿಬ್ಬಂದಿ ವರ್ಗದವರು ಮತ್ತು ಅಧ್ಯಾಪಕೇತರ ಸಂಘದವರು ಪ್ರಸ್ತುತ ಪ್ರಾಂಶುಪಾಲರ ವಿರುದ್ಧ ದೂರುಗಳನ್ನು ಸಲ್ಲಿಸಿರುತ್ತಾರೆ. ಹಲವಾರು ವರ್ಷಗಳಿಂದ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಿವಕುಮಾರ್.ಜೆ ಅವರು ಪ್ರಾಂಶುಪಾಲರು ಕಿರುಕುಳ ನೀಡುತ್ತಿದ್ದಾರೆಂದು Death Note ನಲ್ಲಿ ತಿಳಿಸುವುದರೊಂದಿಗೆ ಮಗ ಮತ್ತು ಪತ್ನಿಯನ್ನು ನೆನಪು ಮಾಡಿಕೊಂಡು ನಾನು ಸಾಯುತ್ತಿದ್ದೇನೆ ಕ್ಷಮಿಸಬೇಕೆಂದು ತುಂಬಾ ಭಾವನಾತ್ಮಕವಾಗಿ ಬರೆದಿದ್ದಾರೆ. ಕಿರುಕುಳ ನೀಡಿಲ್ಲದಿದ್ದರೆ ಈ ಮಟ್ಟಕ್ಕೆ ಇಳಿಯುತ್ತಿರಲಿಲ್ಲವೆಂದರು.

ಶ್ರೀ ಮಹದೇಶು ಮಾತನಾಡಿ, ವಿಶ್ವವಿದ್ಯಾನಿಲಯದ ಘನತೆ ಉಳಿಯಬೇಕು. ಒಂದು ವೇಳೆ ಶಿವಕುಮಾರ್.ಜೆ ಅವರು ಕಛೇರಿ ಕರ್ತವ್ಯದಲ್ಲಿ ಏನಾದರೂ ಲೋಪವೆಸಗಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದರೆ ಕನಿಕರ ತೋರಿಸಬಹುದೆಂದು ಅರ್ಥವಲ್ಲ. ಪತ್ನಿ ಮತ್ತು ಮಗನನ್ನು ನೆನಪು ಮಾಡಿಕೊಳ್ಳುವುದು ವೈಯಕ್ತಿಕ ವಿಚಾರ. ಈ ವಿಚಾರದಲ್ಲಿ ಯಾರನ್ನೂ ಬಲಿಪಶು ಮಾಡಬಾರದು. ಪ್ರಾಂಶುಪಾಲರು ಹಲವಾರು ವರ್ಷಗಳಿಂದ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ದೂರನ್ನು ಹೊರತುಪಡಿಸಿದರೆ ಅವರ ವಿರುದ್ಧ ಯಾವುದೇ ದೂರುಗಳಿರುವುದಿಲ್ಲವೆಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ದಿನಾಂಕ: 16-11-2021ರಲ್ಲಿ ಯುವರಾಜ ಕಾಲೇಜಿನಲ್ಲಿರುವ ಅಧ್ಯಾಪಕರುಗಳು ಪ್ರಾಂಶುಪಾಲರ ವಿರುದ್ದ ದೂರಿನ ಮನವಿ ಸಲ್ಲಿಸಿರುತ್ತಾರೆ. ಅದರ ಪ್ರತಿ ಇರುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಶೈಕ್ಷಣಿಕ ಹಿತದೃಷ್ಟಿಯಿಂದ ಇಂತಹ ಘಟನೆಗಳು ನಡೆಯಬಾರದು. ಈ ಘಟನೆಯ ಸಂಬಂಧ ಕ್ರಮ ಜರುಗಿಸಬೇಕು, ಇಲ್ಲವಾದಲ್ಲಿ ನಿರಂತರವಾಗಿ ನಡೆಯುತ್ತದೆ. ಈ ವಿಷಯದಲ್ಲಿ ಏಕಪಕ್ಷಿಯ ನಿರ್ಧಾರ ತೆಗೆದುಕೊಳ್ಳುವ ಬದಲು ವಿಶ್ವವಿದ್ಯಾನಿಲಯದ ಒಳಿತಿಗಾಗಿ ಸರ್ವಾನುಮತದಿಂದ ನಿರ್ಣಯ ತೆಗೆದುಕೊಳ್ಳುವುದು ಸೂಕ್ತವೆಂದು ಸಿಂಡಿಕೇಟ್ ವಿಶೇಷ ಸಭೆಯನ್ನು ಕರೆಯಲಾಗಿದೆ ಎಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಎರಡು ಕಡೆ ವಿಚಾರಣೆ ನಡೆಸಬೇಕು. ಇಂತಹ ಸಂದರ್ಭಗಳಿದ್ದಾಗ ಸರ್ಕಾರದ ಮಟ್ಟದಲ್ಲಾಗಲೀ ಅಥವಾ ಅಧಿಕಾರಿ ಮಟ್ಟದಲ್ಲಾಗಲೀ, ಆ ಸ್ಥಾನದಿಂದ ಕೆಳಗಿಳಿಸಿ ವಿಚಾರಣೆ ಮಾಡುವುದು ಸಂಪ್ರದಾಯವಾಗಿದೆ. ಅದೇ ಸಂಪ್ರದಾಯವನ್ನು ಇಲ್ಲಿಯೂ ಪಾಲನೆ ಮಾಡೋಣವೆಂದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಅಮಾನತು ಎನ್ನುವ ಪದವನ್ನು ಹೊರತುಪಡಿಸಿ,

ಪ್ರಾಂಶುಪಾಲರನ್ನು ಮಾತ್ರ ವಿಭಾಗಕ್ಕೆ ವರ್ಗಾಯಿಸಿ ನಂತರ ವಿಚಾರಣೆ ನಡೆಸಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುವುದು ಸೂಕ್ತ. ಇಬ್ಬರ ಮೇಲೂ ವಿಚಾರಣೆ ಮಾಡಬೇಕು. ಈ ಸಂಬಂಧ ಸಮಿತಿ ರಚನೆ ಮಾಡಿ, ಸಮಿತಿಯ ಶಿಫಾರಸ್ಸಿನನ್ವಯ ಕ್ರಮವಹಿಸಬೇಕೆಂದರು.

ಶ್ರೀ ಮಹದೇಶು ಅವರು ಮಾತನಾಡಿ, ಪ್ರಾಂಶುಪಾಲರು ಮತ್ತು ಶಿವಕುಮಾರ್.ಜೆ ಈ ಇಬ್ಬರ ಮೇಲೂ ವಿಚಾರಣೆ ನಡೆಸಬೇಕೆಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಯುವರಾಜ ಕಾಲೇಜು ಬೋಧಕವರ್ಗ, ಬೋಧಕೇತರ ವರ್ಗ, ಕಾನೂನು ತಜ್ಞರು ಮತ್ತು ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಒಂದು ಸಮಗ್ರವಾದ ಸಮಿತಿ ರಚಿಸಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸರ್ಕಾರದ ಸುತ್ತೋಲೆಯನ್ವಯ ವಿಶ್ವವಿದ್ಯಾಲಯಗಳ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಸದಸ್ಯ/ಅಧ್ಯಕ್ಷರನ್ನಾಗಿ ನೇಮಿಸದೇ ವಿಷಯ ಪರಿಣಿತರನ್ನು/ಶಿಕ್ಷಣ ತಜ್ಞರನ್ನು ನೇಮಿಸಲು ಸೂಚಿಸಲಾಗಿದೆ. ಇದು ಹಿತಾಸಕ್ತಿ ಸಂಘರ್ಷಕ್ಕೂ ಕಾರಣವಾಗುತ್ತದೆ. ಸದರಿ ಪ್ರಕರಣದಲ್ಲಿ ಶಿಸ್ತುಕ್ರಮ ಜರುಗಿಸುವ ಸಂಭವವಿರುವುದರಿಂದ ವಿಶ್ವವಿದ್ಯಾನಿಲಯದ ಅಧಿನಿಯಮ ಆಧರಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಕುಲಸಚಿವರು ತಿಳಿಸಿರುವುದು ಸರಿಯಾಗಿದೆ. ಸಮಿತಿಯನ್ನು ರಚಿಸುವುದಕ್ಕೆ ಹೆಚ್ಚಿನ ಅವಧಿ ತೆಗೆದುಕೊಂಡಷ್ಟು ವಿಷಯಗಳು ಬೇರೆ ವಿಷಯಾಂತರಗಳಾಗುತ್ತವೆ. ಜರೂರಾಗಿ ಸಮಿತಿ ರಚನೆ ಮಾಡಿ, ವಿಚಾರಣೆ ಪೂರ್ಣಗೊಳಿಸಿ, ಸಮಿತಿಯು ಸಲ್ಲಿಸುವ ವರದಿಯನ್ವಯ ಕ್ರಮವಹಿಸುವುದು ಸೂಕ್ತವೆಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನಿಯಮದನ್ವಯ ಸಮಿತಿ ರಚಿಸುವುದು ಸೂಕ್ತ. ಸಮಿತಿಯಲ್ಲಿ ಸಹಜವಾಗಿ ನಾವುಗಳಿದ್ದರೆ ಪ್ರಭಾವ ಬೀರಬಹುದು. ಇದರಿಂದ ಹೊರತಾಗಿರೋಣವೆಂದರು. ವಿಚಾರಣೆಗೆ ನಿಗದಿತ ಅವಧಿಯನ್ನು ನಿಗಧಿಪಡಿಸಿ, ನಿರ್ಧಿಷ್ಟ ಸಮಯದೊಳಗೆ ವರದಿ ಸಲ್ಲಿಸಲು ನಿರ್ದೇಶನ ನೀಡಬೇಕೆಂದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ವಿಚಾರಣೆಯನ್ನು ಪೂರ್ಣಗೊಳಿಸಿ ವರದಿಯನ್ನು ನೀಡುವುದಕ್ಕೆ ನಿಗದಿತ ಅವಧಿಯನ್ನು ನಿಗದಿಪಡಿಸಬೇಕೆಂದರು.

ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ಅವರು ಮಾತನಾಡಿ, ಪ್ರಾಂಶುಪಾಲರನ್ನು ಸ್ವಲ್ಪ ಅವಧಿಯವರೆಗೆ ರಜೆಯ ಮೇಲೆ ತೆರಳುವಂತೆ ನಿರ್ದೇಶಿಸಿ, ಆ ಅವಧಿಯಲ್ಲಿ ತ್ವರಿತವಾಗಿ ವಿಚಾರಣೆಯನ್ನು ನಡೆಸಬೇಕು. ವಿಚಾರಣೆಯ ವಾಸ್ತವಾಂಶದ ಆಧಾರದ ಮೇಲೆ ನಿರ್ಣಯ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಮತ್ತು ಡಾ. ಬಸವರಾಜು .ಸಿ ಅವರುಗಳು ಮಾತನಾಡಿ, ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಇವರಿಬ್ಬರನ್ನು ವಿಚಾರಣೆ ನಡೆಸಿ, ವಿಚಾರಣೆ ಪೂರ್ಣಗೊಂಡು ವರದಿ ಸಲ್ಲಿಸುವವರೆಗೆ ಕಡ್ಡಾಯ ರಜೆಯನ್ನು ಕಳುಹಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಇವರಿಬ್ಬರನ್ನೊಳಗೊಂಡಂತೆ ಸಂಪೂರ್ಣ ತನಿಖೆ ನಡೆಸಿ ನಿರ್ಧಿಷ್ಟ ನಿರ್ಣಯವನ್ನು ತೆಗೆದುಕೊಳ್ಳಬೇಕು. ಸಿಂಡಿಕೇಟ್ ಸಭೆಯು ಕಠಿಣ ಕ್ರಮ ತೆಗೆದುಕೊಳ್ಳುತ್ತದೆಂದು ಮನವರಿಕೆಯೊಂದಿಗೆ ಪುನಃ ಇಂತಹ ಘಟನೆಗಳು ವಿಶ್ವವಿದ್ಯಾನಿಲಯದಲ್ಲಿ ನಡೆಯಬಾರದು. ಪ್ರಾಂಶುಪಾಲರ ಹುದ್ದೆಯು ಪ್ರಭಾರ ಹುದ್ದೆಯಾಗಿರುತ್ತದೆ. ಹಿಂದಿನಿಂದಲೂ ಜೇಷ್ಠತಾ ಪಟ್ಟಿಯಲ್ಲಿ ಸೇವಾ ಹಿರಿತನವನ್ನು ಆಧಾರವಾಗಿಟ್ಟುಕೊಂಡು ಪ್ರಾಂಶುಪಾಲರನ್ನು ನೇಮಕಾತಿ ಮಾಡಲಾಗುತ್ತಿದೆ ಮತ್ತು ಇತ್ತೀಚಿಗೆ ನ್ಯಾಕ್‌ಗೊಳಪಟ್ಟ ಸಂದರ್ಭದಲ್ಲಿ ನಾನು ಹಾಗೂ ಕುಲಸಚಿವರು ಯುವರಾಜ ಕಾಲೇಜಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಕಾಲೇಜಿನ ಬೋಧಕ ಮತ್ತು ಬೋಧಕೇತರರು ಪ್ರಾಂಶುಪಾಲರ ವಿರುದ್ಧ ಅನೇಕ

ದೂರುಗಳನ್ನು ಮೌಖಿಕವಾಗಿ ತಿಳಿಸಿದ್ದರೇ ಹೊರತು ಲಿಖಿತವಾಗಿ ಯಾರು ದೂರನ್ನು ಸಲ್ಲಿಸಿರುವುದಿಲ್ಲ. ಆ ಸಂದರ್ಭದಲ್ಲಿ ಸ್ವಾಯತ್ತ ಕಾಲೇಜಾದ ಯುವರಾಜ ಕಾಲೇಜನ್ನು ನ್ಯಾಕ್‌ಗೊಳಪಡಿಸುವಾಗ ಯಾರ ಅಭಿಪ್ರಾಯವನ್ನು ಏಕೆ ಪಡೆಯಲಿಲ್ಲವೆಂದು ಪ್ರಾಂಶುಪಾಲರಿಗೆ ಪ್ರಶ್ನಿಸಲಾಯಿತು. ಆಗ ಎಲ್ಲಾ ಅಧ್ಯಾಪಕರುಗಳು ಪ್ರಾಂಶುಪಾಲರು ಯಾವುದೇ ನಿರ್ಣಯ ತೆಗೆದುಕೊಂಡರೂ ಯಾರ ಅಭಿಪ್ರಾಯವನ್ನು ಪಡೆಯದೇ ಏಕಪಕ್ಷೀಯವಾಗಿ ನಿರ್ಣಯ ತೆಗೆದುಕೊಳ್ಳುತ್ತಾರೆಂದು ಅಸಾಮಾಧಾನವನ್ನು ವ್ಯಕ್ತಪಡಿಸಿದರು. ಇದನ್ನೆಲ್ಲಾ ಗಮನಿಸಲಾಗಿ ಸದ್ಯದಲ್ಲೇ ಸಭೆಯನ್ನು ಕರೆಯಲಾಗುವುದೆಂದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಮುಂದೆ ಇನ್ಯಾವುದೇ ಕಾರಣಕ್ಕೂ ಈ ರೀತಿಯ ಸಮಸ್ಯೆಗಳು ಎದುರಾಗಬಾರದು. ವಿಚಾರಣಾ ಅವಧಿಯಲ್ಲಿ ಪ್ರಾಂಶುಪಾಲರನ್ನು ಮಾತ್ರ ವಿಭಾಗಕ್ಕೆ ಕಳುಹಿಸಿದಾಗ, ಅಲ್ಲಿಯೂ ಸೇವಾ ಹಿರಿತನ ಆಧಾರದ ಮೇಲೆ ಯುವರಾಜ ಕಾಲೇಜಿಗೆ ಇವರನ್ನು ಪ್ರಾಂಶುಪಾಲರಾಗಿ ನೇಮಕ ಮಾಡಲಾಗುತ್ತದೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾಂಶುಪಾಲರನ್ನು ಮಾತ್ರ ವಿಭಾಗಕ್ಕೆ ವರ್ಗಾಯಿಸಿದ್ದರೆ, ಅವರು ಯುವರಾಜ ಕಾಲೇಜಿನ ವಿಭಾಗದಲ್ಲಿ ಉಪಸ್ಥಿತರಿರುತ್ತಾರೆ. ಆದ್ದರಿಂದ ವಿಚಾರಣೆ ಮುಗಿಯುವವರೆಗೂ ಪ್ರಾಂಶುಪಾಲರಿಗೆ ಕಡ್ಡಾಯ ರಜೆಯ ಮೇಲೆ ತೆರಳಲು ಸೂಚಿಸಲಾಗುವುದು. ಆ ಅವಧಿಯಲ್ಲಿ ಯುವರಾಜ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾಗಿ ಕಾಲೇಜಿನ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ವಿಚಾರಣೆಯನ್ನು ಜರೂರಾಗಿ ನಡೆಸಲಾಗುವುದೆಂದು ತಿಳಿಸಿದರು.

ಶ್ರೀ ನಟರಾಜು .ಹೆಚ್.ಎಸ್. ಅವರು ಮಾತನಾಡಿ, ಈ ವಿಚಾರಣೆಯು ನಿಷ್ಪಕ್ಷಪಾತವಾಗಿ ನಡೆಯಬೇಕು. ಏಕೆಂದರೆ, ವಿವಿ ಸಂಜೆ ಕಾಲೇಜಿನಲ್ಲಿನ ಪ್ರಾಧ್ಯಾಪಕರಾದ ಪ್ರೊ. ರಾಚಯ್ಯ ಅವರನ್ನು ಅಸ್ಪೃಶ್ಯ ಎಂದು ಕರೆದುದಾಗಿ ಪ್ರಾಂಶುಪಾಲರಾದ ಡಾ. ದೇವರಾಜೇಗೌಡ ಇವರ ವಿರುದ್ಧ ಆರೋಪ ಮಾಡಿದ್ದಾರೆ. ಶಿವಕುಮಾರ್ .ಜೆ ಮಾತ್ರವಲ್ಲ, ಅವರೊಂದಿಗೆ ಕಾರ್ಯನಿರ್ವಹಿಸುತ್ತಿದ್ದ ಅಧ್ಯಾಪಕರುಗಳು ಮತ್ತು ಉದ್ಯೋಗಿಗಳು ಸಹ ಪ್ರಾಂಶುಪಾಲರ ವಿರುದ್ಧ ಆರೋಪ ಮಾಡಿರುತ್ತಾರೆ. ಈ ಬಗ್ಗೆ ಮಾನ್ಯ ರಾಜ್ಯಪಾಲರಿಗೂ ಪತ್ರ ಬರೆದಿರುವುದು ತಿಳಿದುಬಂದಿದೆ. ಶಿವಕುಮಾರ್ .ಜೆ ಆತ್ಮಹತ್ಯೆ ಪ್ರಯತ್ನ ಮಾಡಿರುವುದು ನಿಜಕ್ಕೂ ವಿಶ್ವವಿದ್ಯಾನಿಲಯಕ್ಕೆ ಅವಮಾನಕರ ವಿಷಯವಾಗಿದೆ. ಏಕೆಂದರೆ ಆಡಳಿತದಲ್ಲಿ ಪೂರಕವಾದ ವಾತಾವರಣವಿರಬೇಕು. ಇದನ್ನೆಲ್ಲಾ ಗಮನಿಸಿದರೆ ಯುವರಾಜ ಕಾಲೇಜಿನ ಆಡಳಿತವು ಉತ್ತಮವಾಗಿಲ್ಲವೆಂದು ತಿಳಿಸಿದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಸಮಿತಿ ರಚಿಸಿ ವಿಚಾರಣಾ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರ ಕಠಿಣವಾದ ತೀರ್ಮಾನ ತೆಗೆದುಕೊಳ್ಳಬೇಕು. ವಿಚಾರಣೆ ನಡೆಸುವುದಾದರೆ ಯಾರಿಗೂ ಕಿಂಚಿತ್ತು ಪರ-ವಿರೋಧಗಳಿಲ್ಲದೆ ನಿಷ್ಪಕ್ಷಪಾತವಾಗಿ ನಡೆಯಬೇಕು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತವಿರುವ ಅಧಿಕಾರಿ ವರ್ಗ ಮತ್ತು ಸಿಂಡಿಕೇಟ್ ಸಭೆಯು ತೆಗೆದುಕೊಳ್ಳುವ ತೀರ್ಮಾನವು ಎಲ್ಲರಿಗೂ ಮಾದರಿಯಾಗಿರಬೇಕೆಂದರು.

ಶ್ರೀ ಮಹದೇವು ಅವರು ಮಾತನಾಡಿ, ವಿಶ್ವವಿದ್ಯಾನಿಲಯವು ತೆಗೆದುಕೊಳ್ಳುವ ನಿರ್ಣಯವು ಸಮಾಜಕ್ಕೆ ಒಂದು ಒಳ್ಳೆಯ ಸಂದೇಶವನ್ನು ನೀಡಬೇಕೆಂದರು.

ಶ್ರೀ ನಾಗರಾಜು .ಸಿ ಅವರು ಮಾತನಾಡಿ, 10-20 ದಿನದೊಳಗೆ ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಅವರುಗಳು ರಾಜೀ ಸಂಧಾನವಾದರೆ ಪ್ರಕರಣವೇ ಮುಚ್ಚಿ ಹೋಗುತ್ತದೆ. ಆದ್ದರಿಂದ ಸದರಿ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಧಾರವು ಮುಖ್ಯವಾಗಿರುತ್ತದೆ ಎಂದರು.

ಕುಲಸಚಿವರು ಮಾತನಾಡಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು, ಸಿಂಡಿಕೇಟ್ ಸದಸ್ಯರು ಹಾಗೂ ಸಿಬ್ಬಂದಿಗಳನ್ನು ಹೊರತುಪಡಿಸಿ, ತಟಸ್ಥರಾದ ಹಾಗೂ ವಿಚಾರಣೆಯಲ್ಲಿ ಪರಿಣಿತಿ ಹೊಂದಿದ ಅಂದರೆ ನಿವೃತ್ತ ನ್ಯಾಯಾಧೀಶರನ್ನು ವಿಚಾರಣೆ ಮಾಡಲು ತೀರ್ಮಾನಿಸುವುದರಿಂದ ನಿಷ್ಪಕ್ಷಪಾತವಾದ ವಿಚಾರಣೆಯಾಗುತ್ತದೆ ಎಂದು ತಿಳಿಸಿದರು.

ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯವು ಶೈಕ್ಷಣಿಕ ಸಂಸ್ಥೆಯಾಗಿರುವುದರಿಂದ, ಏಕ ಸದಸ್ಯ ಸಮಿತಿ ರಚಿಸುವ ಬದಲು ಶೈಕ್ಷಣಿಕ ತಜ್ಞರನ್ನೊಳಗೊಂಡಂತೆ ಸಮಿತಿ

| | |
|---|---|
| ರಚಿಸಬೇಕೆಂದು ಅಭಿಪ್ರಾಯಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸಮಿತಿ ರಚನೆಯಲ್ಲಿ ಶೈಕ್ಷಣಿಕ ತಜ್ಞರನ್ನು ಸೇರ್ಪಡೆಗೊಳಸುವುದರಿಂದ ವಿಚಾರಣೆಯಲ್ಲಿ ಪ್ರಭಾವ ಬೀರಲು ಅವಕಾಶವಿರುತ್ತದೆ ಎಂದರು.<br><br>ಶ್ರೀ ಗೋಕುಲ್ ಗೋವರ್ಧನ್ ಮತ್ತು ಡಾ. ಟಿ.ಆರ್. ಚಂದ್ರಶೇಖರ್ ಅವರುಗಳು ಮಾತನಾಡಿ, ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಇಬ್ಬರಿಗೂ ಕಡ್ಡಾಯ ರಜೆಯ ಮೇಲೆ ತೆರಳಲು ಸೂಚಿಸಿ, ಒಂದು ತಿಂಗಳೊಳಗೆ ವಿಚಾರಣೆ ನಡೆಸಿ, ವರದಿ ಸಲ್ಲಿಸುವ ನಿಟ್ಟಿನಲ್ಲಿ ಸಮಿತಿ ರಚಿಸಬೇಕು. ತಡವಾದರೆ ಪ್ರಕರಣವು ಕೆಲವು ತಿರುವುಗಳನ್ನು ಪಡೆಯಬಹುದೆಂದರು.<br><br>ಡಾ. ಮಹದೇಶು ಅವರು ಮಾತನಾಡಿ, ಶಿವಕುಮಾರ್ .ಜೆ ಅವರು ಕಾಲೇಜಿಗೆ ಹಾಜರಾದರೆ, ಕೆಲವೊಂದು ದಾಖಲಾತಿಯನ್ನು ನಾಶಪಡಿಸುವ ಸಾಧ್ಯತೆಯಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಇಬ್ಬರನ್ನು ರಜೆ ಮೇಲೆ ತೆರಳಲು ಸೂಚಿಸುವುದರೊಂದಿಗೆ, ಸಮಿತಿ ರಚನೆ ಮಾಡಿ ವಿಚಾರಣೆ ನಡೆಸಬೇಕೆಂದು ಸಲಹೆ ನೀಡಿದರು.<br><br>ಈ ಸಲಹೆಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಇಬ್ಬರನ್ನು ಕಡ್ಡಾಯವಾಗಿ ರಜೆಯ ಮೇಲೆ ತೆರಳಲು ಸೂಚಿಸಿ, ವಿಚಾರಣ ಸಮಿತಿ ರಚನೆ ಮಾಡಿ ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸಲಾಗುವುದು ಹಾಗೂ ವಿಚಾರಣೆ ಪೂರ್ಣಗೊಳ್ಳುವವರೆಗೆ ಇವರುಗಳು ಯಾವುದೇ ಕಾರಣಕ್ಕೂ ವಿಶ್ವವಿದ್ಯಾನಿಲಯದ ಅನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡಬಾರದೆಂದು ನಿರ್ದೇಶಿಸಲಾಗುವುದೆಂದು ತಿಳಿಸಿದರು.<br><br>ಶ್ರೀ ನಟರಾಜು .ಹೆಚ್.ಎಸ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರು ಹಾಗೂ ಅಧ್ಯಾಪಕೇತರರುಗಳಿಗೆ ಇನ್ನು ಮುಂದೆ ಈ ರೀತಿಯ ಪ್ರಕರಣಗಳು ನಡೆಯಬಾರದೆಂದು ಸುತ್ತೋಲೆ ಹೊರಡಿಸುವುದು ಸೂಕ್ತವೆಂದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಶ್ರೀ ನಟರಾಜು .ಹೆಚ್.ಎಸ್ ಅವರು ತಿಳಿಸಿರುವಂತೆ ಸುತ್ತೋಲೆ ಹೊರಡಿಸಬಹುದು. ಸುತ್ತೋಲೆಯಲ್ಲಿ "ತಮ್ಮ ಇಲಾಖೆ ಮುಖ್ಯಸ್ಥರಿಂದ ಏನಾದರೂ ಕಿರುಕುಳ ಉಂಟಾದರೆ ಕುಲಪತಿ/ಕುಲಸಚಿವರಿಗೆ ದೂರು ಸಲ್ಲಿಸಬೇಕು" ಎಂಬ ವಾಕ್ಯವನ್ನು ಸೇರ್ಪಡೆಗೊಳಸಬೇಕೆಂದರು. ಈ ಪ್ರಸ್ತಾವನೆಗೆ ಮಾನ್ಯ ಕುಲಪತಿಗಳು ಒಪ್ಪಿಗೆ ಸೂಚಿಸಿದರು.<br><br>ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ ಅವರು ಮಾತನಾಡಿ, ಪ್ರತಿ ಕಾಲೇಜಿನಲ್ಲಿಯೂ "ಕುಂದುಕೊರತೆಗಳ ಸಮಿತಿ' ರಚಿಸುವುದು ಕಡ್ಡಾಯವಾಗಿದೆ. ಇದೇ ರೀತಿ ವಿಶ್ವವಿದ್ಯಾನಿಲಯದಲ್ಲೂ ರಚನೆ ಮಾಡಬೇಕೆಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, "ಕುಂದುಕೊರತೆಗಳ ಸಮಿತಿ' ರಚನೆಯು ಉದ್ಯೋಗಿಗಳು ಮಾತ್ರ ದೂರು ಸಲ್ಲಿಸಬಹುದು ಹೊರತು ಪ್ರಾಂಶುಪಾಲರು ದೂರು ಸಲ್ಲಿಸಲಾಗುವುದಿಲ್ಲವೆಂದು ಸ್ಪಷ್ಟನೆ ನೀಡಿದರು.<br><br>ಮೇಲ್ಕಂಡ ಅಂಶಗಳನ್ನು ಅವಲೋಕಿಸಿದ ಸಿಂಡಿಕೇಟ್ ವಿಶೇಷ ಸಭೆಯು ಈ ಕೆಳಕಂಡಂತೆ ತೀರ್ಮಾನಿಸಿತು. | |
| **ತೀರ್ಮಾನ** | ಯುವರಾಜ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಹೆಚ್.ಸಿ. ದೇವರಾಜೇಗೌಡ ಹಾಗೂ ಶ್ರೀ ಶಿವಕುಮಾರ್ .ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರುಗಳ ವಿರುದ್ಧ ವಿಚಾರಣೆ ಪೂರ್ಣಗೊಳಿಸಿ ವರದಿ ಸಲ್ಲಿಸುವವರೆಗೆ ಕಡ್ಡಾಯ ರಜೆಯ ಮೇಲೆ ಕಳುಹಿಸುವುದು ಹಾಗೂ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೇ ಯಾವುದೇ ಕಾರಣಕ್ಕೂ ಕೇಂದ್ರ ಸ್ಥಾನವನ್ನು ಬಿಡಬಾರದೆಂಬ ಷರತ್ತಿನೊಂದಿಗೆ ವಿಶ್ವವಿದ್ಯಾನಿಲಯದಿಂದ ನಿರ್ದೇಶನ ನೀಡುವುದು. ಈ ಪ್ರಕರಣದ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ, ಅವರು ನೀಡುವ ವರದಿಯ ಮೇರೆಗೆ ಕ್ರಮಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

| ವಿಶೇಷ ಸಭೆ 2024/ Spl.2 | ಡಾ. ಎಂ. ಮೀರ, ನಿರ್ದೇಶಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ಮೇಲೆ ಬಂದಿರುವ ದೂರುಗಳ ಬಗ್ಗೆ. |
|---|---|
| | ಕುಲಸಚಿವರು ಸದರಿ ಕಾರ್ಯಸೂಚಿಗೆ ಸಂಬಂಧಿಸಿದಂತೆ, ಅಭಿವೃದ್ಧಿ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಎಂ. ಮೀರಾ ಅವರ ಬಗ್ಗೆ ವಿದ್ಯಾರ್ಥಿಗಳು, ಅತಿಥಿ ಉಪನ್ಯಾಸಕರುಗಳು ಹಾಗೂ ಸಿಬ್ಬಂದಿಗಳು ದೂರಿರುವ ಬಗೆಗಿನ ಮಾಹಿತಿಯನ್ನು ಸಭೆಗೆ ಸಂಕ್ಷಿಪ್ತವಾಗಿ ತಿಳಿಸಿದರು. ಹಾಗೂ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದಂತೆ ದಿನಾಂಕ 22-12-20223 ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಡಾ. ಎಂ. ಮೀರಾ, ನಿರ್ದೇಶಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆಯವರೊಂದಿಗೆ ಸಮನ್ವಯ ಸಭೆಯನ್ನು ಒಂದು ಗಂಟೆಗಳ ಕಾಲ ನಡೆಸಲಾಗಿರುತ್ತದೆ. ನಿರ್ದೇಶಕರು ತಮ್ಮ ವಿರುದ್ಧ ನೀಡಿರುವ ದೂರಿನ ಬಗ್ಗೆ ಸಂಕ್ಷಿಪ್ತವಾಗಿ ದಿನಾಂಕ: 8.1.2024 ರಂದು ಲಿಖಿತವಾಗಿ ಸ್ಪಷ್ಟೀಕರಣ ನೀಡಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಡಾ. ಎಂ. ಮೀರ, ನಿರ್ದೇಶಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ರವರು ಸ್ಪಷ್ಟೀಕರಣ ನೀಡಿರುತ್ತಾರೆ. ವಿದ್ಯಾರ್ಥಿಗಳು, ಅತಿಥಿ ಉಪನ್ಯಾಸಕರುಗಳು ಹಾಗೂ ಸಂಶೋಧನಾ ವಿದ್ಯಾರ್ಥಿ ಗಳೊಂದಿಗೆ ನಿರ್ದೇಶಕರೇ ಖುದ್ದಾಗಿ ಚರ್ಚಿಸಿ ಸಮಸ್ಯೆ ಬಗೆಹರಿಸಿಕೊಳ್ಳಲು ಅವಕಾಶ ನೀಡಲಾಗಿತ್ತು. ಇಲ್ಲವಾದಲ್ಲಿ ವಿಶ್ವವಿದ್ಯಾನಿಲಯದಿಂದ ಕ್ರಮಕೈಗೊಳ್ಳುವುದಾಗಿ ತಿಳಿಸಲಾಗಿತ್ತು. ಮೂರು ದಿನದ ನಂತರ ನಿರ್ದೇಶಕರು ಪತ್ರವನ್ನು ಇ-ಮೇಲ್‌ನಲ್ಲಿ ಕಳುಹಿಸಿರುತ್ತಾರೆಂದು ತಿಳಿಸಿದರು. ಹಾಗೂ ಇಂತಹ ಪ್ರಕರಣಗಳು ಮರುಕಳಿಸದಂತೆ ಕ್ರಮಕೈಗೊಳ್ಳುವ ನಿಟ್ಟಿನಲ್ಲಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಸಭೆಗೆ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ನಿರ್ದೇಶಕರು ವಿಭಿನ್ನ ಸಮಯದಲ್ಲಿ ವಿದ್ಯಾರ್ಥಿಗಳೊಂದಿಗೆ ಹಾಗೂ ಶಿಕ್ಷಕರೊಂದಿಗೆ ಮಾತನಾಡಿರುವುದಾಗಿ ಇ-ಮೇಲ್ ಕಳುಹಿಸಿರುತ್ತಾರೆ. ಯಾವ ತೀರ್ಮಾನಕ್ಕೆ ಬಂದಿದ್ದಾರೆ ಎಂಬ ಬಗ್ಗೆ ಮಾಹಿತಿ ತಮಗೆ ನೀಡಿಲ್ಲ ಎಂದು ಸಭೆಯ ಗಮನಕ್ಕೆ ತಂದರು.<br><br>ಡಾ. ಶಿಲ್ಪ. ಜೆ ಮಾತನಾಡಿ, ಸಿ.ಸಿ.ಕ್ಯಾಮರಾ ಅಥವಾ ಬಯೋಮೆಟ್ರಿಕ್ ಸಂಸ್ಥೆಯಲ್ಲಿ ಅಳವಡಿಸಲಾಗಿದೆಯಾ ಎಂದು ಪ್ರಶ್ನಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಶೇಕಡ 10 ರಿಂದ 15 ರಷ್ಟು ಶಿಕ್ಷಕರು ಸರಿಯಾದ ಸಮಯಕ್ಕೆ ಹಾಜರಾಗುವುದಿಲ್ಲ. ಆದರೆ ಉಳಿದಂತೆ ಎಲ್ಲಾ ಶಿಕ್ಷಕರು ವಿಭಾಗಗಳಿಗೆ ಬೆಳಗ್ಗೆಯೇ ಹಾಜರಾಗಿರುತ್ತಾರೆ. ಆದ್ದರಿಂದ 10 ರಿಂದ 5 ಗಂಟೆಯವರೆಗೆ ನಿರ್ದೇಶಕರು ವಿಭಾಗದಲ್ಲಿ ಹಾಜರಿದ್ದಲ್ಲಿ ಯಾವ ಸಮಸ್ಯೆಯು ತಲೆದೋರುವುದಿಲ್ಲವೆಂದು ತಾವು ಈಗಾಗಲೇ ತಿಳಿಸಿರುವುದಾಗಿ ಸಭೆಯ ಗಮನಕ್ಕೆ ತಂದರು. ಪದೇ ಪದೇ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ವಿದ್ಯಾರ್ಥಿಗಳು ತಮ್ಮನ್ನು ಭೇಟಿ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದಾರೆ. ನಾವು ಶಿಕ್ಷಕರಿಗೆ ಅವಕಾಶ ನೀಡಿದ್ದರೂ ಸಹ ಅವರು ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಿಲ್ಲ. ಸದರಿ ವಿಷಯದ ಬಗ್ಗೆ ವಿಚಾರಣೆ ನಡೆಯಬೇಕೆಂದು ತಿಳಿಸಿದರು.<br><br>ಶ್ರೀ ಮಹದೇಶು ಮಾತನಾಡಿ, ವಿದ್ಯಾರ್ಥಿಗಳು ಸದರಿ ನಿರ್ದೇಶಕರನ್ನು ತೆರವುಗೊಳಿಸಿ ಎಂದು ಕೋರಿರುವುದನ್ನು ಮನ್ನಣೆ ಮಾಡಿ ಎಂದು ತಿಳಿಸಿದರು.<br><br>ಶ್ರೀ ನಟರಾಜ್ ಹೆಚ್.ಎಸ್. ರವರು ಮಾತನಾಡಿ, ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಸುಮಾರು 96 ಮಂದಿ ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಕೂಡ ಅವರ ವಿರುದ್ಧವಾಗಿದ್ದು, ಅಲ್ಲಿಯ ವಾತಾವರಣ ಸರಿಯಾಗಿರಬೇಕಾದಲ್ಲಿ ಸದರಿ ನಿರ್ದೇಶಕರನ್ನು ತೆರವುಗೊಳಿಸಿ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. |

ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ರವರು ಮಾತನಾಡಿ, ಸದರಿ ನಿರ್ದೇಶಕರ ಹೇಳಿಕೆಯನ್ನು ಪಡೆಯದೇ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳಬಾರದೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಈಗಾಗಲೇ ದಿನಾಂಕ: 12.12.2023 ರಂದು ಮಾನ್ಯ ಕುಲಪತಿಗಳು ಹಾಗೂ ಕುಲಸಚಿವ, ಪ್ರೊ. ಮಂಜುನಾಥ್, ವ್ಯವಹಾರ ಅಧ್ಯಯನ ವಿಭಾಗ ಹಾಗೂ ಉಪಕುಲಸಚಿವ ಸಾಮಾನ್ಯ ಇವರು ಅಭಿವೃದ್ಧಿ ಅಧ್ಯಯನ ಕೇಂದ್ರಕ್ಕೆ ಭೇಟಿ ನೀಡಿ, ಮುಷ್ಕರ ನಿರತ ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ಬೋಧಕ/ಬೋಧಕೇತರರ ಸಮಸ್ಯೆಗಳನ್ನು ಮೂರು ಗಂಟೆಗಳಿಗೂ ಅಧಿಕ ಕಾಲ ಆಲಿಸಲಾಗಿರುತ್ತದೆ. ಆ ದಿನ ಕೇಂದ್ರದ ನಿರ್ದೇಶಕರಾದ ಡಾ. ಮೀರಾರವರು ಗೈರು ಹಾಜರಾಗಿರುತ್ತಾರೆ. ದಿನಾಂಕ : 5.1.2024 ರಂದು ವಿಶ್ವವಿದ್ಯಾನಿಲಯದ ವತಿಯಿಂದ ಡಾ. ಮೀರಾ ರವರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿ ದಿನಾಂಕ: 8.1.2024 ರಂದು ಅವರು ಲಿಖಿತ ಸಮಜಾಯಿಷಿ ಸಲ್ಲಿಸಿದ್ದು, ಈಗಾಗಲೇ ಸಭೆಯ ಗಮನಕ್ಕೆ ಓದಿ ಮಂಡಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಿರ್ದೇಶಕರು ತಮ್ಮ ಕಛೇರಿಗೆ ಅಂದಿನ ದಿನವಾಗಲಿ ಅಥವಾ ಮಾರನೇ ದಿನವಾಗಲಿ ಸ್ಪಷ್ಟೀಕರಣ ನೀಡಲು ಬರಲಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಶ್ರೀ. ನಟರಾಜ್ ಹೆಚ್.ಎಸ್ ರವರು ಮಾತನಾಡಿ, ನಿರ್ದೇಶಕರು ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಜೊತೆಗೆ ದೇವರಾಜ ಅರಸು ಅಧ್ಯಯನ ಪೀಠದ ಉಸ್ತುವಾರಿಯನ್ನು ನೋಡಿಕೊಳ್ಳಬೇಕಾಗಿದೆಯೆಂದು ತಮ್ಮ ಪತ್ರದಲ್ಲಿ ಸ್ಪಷ್ಟನೆ ನೀಡಿರುತ್ತಾರೆ. ಕೆಲವೊಂದು ವಿಭಾಗದಲ್ಲಿ ಅಧ್ಯಯನ ಪೀಠಗಳು ಕೂಡ ಇರುತ್ತವೆ. ಉದಾಹರಣೆಗೆ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಎನ್. ರಾಚಯ್ಯ ಅಧ್ಯಯನ ಪೀಠವಿದ್ದು, ಅದರ ಜವಾಬ್ದಾರಿಯನ್ನು ಅಧ್ಯಕ್ಷರುಗಳೇ ವಹಿಸಿಕೊಂಡಿರುತ್ತಾರೆ. ಆದರೆ ಯಾವ ವಿಭಾಗದಲ್ಲಿಯೂ ಸಹ ಸಮಸ್ಯೆಗಳಿಲ್ಲ, ಈ ವಿಭಾಗದಲ್ಲಿ ಮಾತ್ರ ಏಕೆ? ನಿರ್ದೇಶಕರು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದ್ದರೆ ಇಂತಹ ಸಮಸ್ಯೆಗಳು ಉದ್ಭವಿಸುವುದಿಲ್ಲ ಬಹುತೇಕರು ಅವರು ವಿರುದ್ಧವಿರುತ್ತಿರಲಿಲ್ಲ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ರವರು ಮಾತನಾಡಿ ಒಂದು ಚಿಕ್ಕ ವಿಚಾರಣೆಯನ್ನು ಕೈಗೊಳ್ಳಿ ಎಂದು ಸಲಹೆ ನೀಡಿದರು.

ಶ್ರೀ. ನಾಗರಾಜು ಸಿ. ರವರು ಮಾತನಾಡಿ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ದಿನಾಚರಣೆ, ಸಂವಿಧಾನ ದಿನ ಹಾಗೂ ಪರಿನಿರ್ವಾಣ ದಿನವನ್ನು ಕೂಡ ಆಚರಿಸಬೇಕೆಂತಲೇ ಸಂಸ್ಥೆಗೆ ಹಾಜರಾಗದೆ ಗೌರವ ಸಲ್ಲಿಸುವ ಕಾರ್ಯಕ್ರಮಕ್ಕೆ ಅಡಚಣೆ ಉಂಟುಮಾಡಿರುತ್ತಾರೆ ಎಂದು ವಿದ್ಯಾರ್ಥಿಗಳು ದೂರಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು. ಭಾರತ ಸರ್ಕಾರವಾಗಲೀ ಅಥವಾ ಕರ್ನಾಟಕ ಸರ್ಕಾರವಾಗಲೀ ಮಹಾನ್ ರಾಷ್ಟ್ರೀಯ ನಾಯಕರಿಗೆ ಗೌರವ ಕೊಡುವಂತೆ, ನಾವೆಲ್ಲರೂ ಕೊಡುತ್ತಿದ್ದೇವೆ. ಆದರೆ ಸದರಿ ನಿರ್ದೇಶಕರು ಗೌರವ ಸಲ್ಲಿಸದೆ ಇರುವುದರಿಂದ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು. ಜೊತೆಗೆ ಈ ವಿಷಯದ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದಲ್ಲಿ ನಮಗಾಗಲೀ ನಿಮಗಾಗಲೀ ಗೌರವ ಸಿಗುವುದಿಲ್ಲವೆಂದರು.

ಕುಲಸಚಿವರು ಮಾತನಾಡಿ, ಸದರಿ ದೂರಿನ ಬಗ್ಗೆ ನಿರ್ದೇಶಕರು ಈಗಾಗಲೇ ಸ್ಪಷ್ಟೀಕರಣ ನೀಡಿರುತ್ತಾರೆಂದು ತಿಳಿಸುತ್ತಾ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಾ. ಮೀರ

| | |
|---|---|
| | ರವರು ದಿನಾಂಕ 8-1-2024 ರಂದು ಕುಲಸಚಿವರಿಗೆ ಬರೆದಿರುವ ಪತ್ರವನ್ನು ಸಭೆಯಲ್ಲಿ ಮತ್ತೊಮ್ಮೆ ಮಂಡಿಸಿದರು.<br><br>ಶ್ರೀ ಮಹದೇಶು ಅವರು ಮಾತನಾಡಿ, ಎಲ್ಲರೂ ಸ್ಪಷ್ಟನೆ ನೀಡುತ್ತಾರೆ, ಅದರಂತೆ ಅವರು ನೀಡಿದ್ದಾರೆ. ಆದ್ದರಿಂತೆ ಅವರನ್ನು ನಿರ್ದೇಶಕರ ಹುದ್ದೆಯಿಂದ ತೆಗೆಯುವಂತೆ ತಿಳಿಸಿದರು.<br><br>ಡಾ. ಬಸವರಾಜು ಸಿ ರವರು ಸದರಿ ವಿಷಯದ ಕುರಿತು ತನಿಖೆ ಮಾಡಿ ಸೂಕ್ತ ಕ್ರಮವನ್ನು ತಗೆದುಕೊಳ್ಳಿ ಎಂದು ಸಲಹೆ ನೀಡಿದರು.<br><br>ಶ್ರೀ ನಟರಾಜ್ ಹೆಚ್.ಎಸ್. ಅವರು ಮಾತನಾಡಿ ಇಂತಹ ಪ್ರಕರಣಗಳು ಬಂದಾಗ ವಿಚಾರಣೆಯನ್ನು ನಡೆಸಿ ಅದರ ಫಲಿತಾಂಶಕ್ಕಾಗಿ ಕಾಯುವುದರ ಬದಲು ಸಿಂಡಿಕೇಟ್‌ನಲ್ಲೇ ನಿರ್ಣಯ ಕೈಗೊಳ್ಳಲು ಸಾಧ್ಯವಿಲ್ಲವೇ ಎಂದು ಪ್ರಶ್ನಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ನಾನು ವಿದ್ಯಾರ್ಥಿಗಳೊಂದಿಗೆ ಇದ್ದು ಬಂದವರು. ವಿದ್ಯಾರ್ಥಿಗಳಲ್ಲಿ ಹಾಗೂ ಪ್ರಾಧ್ಯಾಪಕರುಗಳಲ್ಲಿ ಕೆಲವು ಭಿನ್ನಾಭಿಪ್ರಾಯಗಳಿರುತ್ತವೆ. ಅವೆಲ್ಲ ಕ್ಷಣಿಕ. ಹಾಗಂದ ಮಾತ್ರಕ್ಕೆ ನಾವು ವಿದ್ಯಾರ್ಥಿಗಳಿಗೆ ಅಂಕಗಳನ್ನು ಕಡಿಮೆ ಕೊಡುವುದಿಲ್ಲ, ಆದ್ದರಿಂದ ವಿಭಾಗಗಳಲ್ಲಿ ಏನೇ ಸಮಸ್ಯೆಗಳಿದ್ದರೂ ವಿಭಾಗಗಳ ಮುಖ್ಯಸ್ಥರೇ ಬಗೆಹರಿಸಿಕೊಳ್ಳಬೇಕು, ನಮ್ಮ ಹತ್ತಿರ ಎಲ್ಲಾ ವಿಷಯಗಳನ್ನು ತರುವ ಅಗತ್ಯವಿರುವುದಿಲ್ಲ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ದಿನಾಚರಣೆ ಆಚರಣೆ ಮಾಡದೆ ಇರುವುದು, ಪರೀಕ್ಷೆಗೆ ಸಂಬಂಧಿಸಿದ ವಿಷಯ ಹಾಗೂ ಪ್ರವೇಶಾತಿ ಮಾಡಿಕೊಳ್ಳುವ ವಿಷಯವು ಆಯಾಯ ವಿಭಾಗದ ಮಟ್ಟದಲ್ಲೇ ಮುಗಿಯಬೇಕು. ಆದ್ದರಿಂದ ಡಾ. ಎಂ. ಮೀರಾ ಅವರಿಗೆ ಒಂದು ಅವಕಾಶ ಕೊಟ್ಟಿರುವುದಾಗಿ ತಿಳಿಸಿದರು.ಇಲ್ಲವಾದಲ್ಲಿ ಅಂದೇ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೆ ಎಂದು ತಿಳಿಸಿದರು.<br><br>ಶ್ರೀ ಮಹದೇಶು ಇವರು ಮಾತನಾಡಿ, ಸದರಿ ವಿಷಯದ ಕುರಿತು ತನಿಖೆ ಮಾಡಿ ಅಥವಾ ಸದರಿ ನಿರ್ದೇಶಕರನ್ನು ತೆರವುಗೊಳಿಸಿ ಎಂದು ಸಭೆಯಲ್ಲಿ ಆಗ್ರಹಿಸಿದರು.<br><br>ಡಾ. ಬಸವರಾಜು ಸಿ. ರವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಪತ್ರ ಮುಖೇನ ಬರೆದಿದ್ದು, ನಿರ್ದೇಶಕರು ಸ್ಪಷ್ಟೀಕರಣ ನೀಡಿರುವುದರಿಂದ ಹಾಗೂ ಸ್ಪಷ್ಟೀಕರಣ ನೀಡಿರುವುದಕ್ಕೆ ಕಾರಣವೇನು ಎಂಬುದರ ಬಗ್ಗೆ ತನಿಖೆ ಮಾಡಿ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಅತಿಥಿ ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಸಣ್ಣ ಸಣ್ಣ ವಿಚಾರಕ್ಕೂ ತಮ್ಮ ಬಳಿ ಬರುತ್ತಿದ್ದು, ಸಣ್ಣ ಪುಟ್ಟ ಸಮಸ್ಯೆಗಳನ್ನು ವಿಭಾಗದಲ್ಲೇ ಬಗೆಹರಿಸಿಕೊಳ್ಳುವುದು ಸೂಕ್ತ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.<br><br>ಕುಲಸಚಿವರು ಮಾತನಾಡಿ, ಅಧ್ಯಾಪಕರುಗಳು ತಮ್ಮ ಕರ್ತವ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಬೇಕು, ಅದಕ್ಕಾಗಿ ಸರ್ಕಾರ ವೇತನವನ್ನು ಪಾವತಿಸುತ್ತಿದೆ. ತಮ್ಮ ಶೈಕ್ಷಣಿಕ ಕರ್ತವ್ಯವನ್ನು ಪ್ರೀತಿಸಬೇಕು, ಉತ್ತಮ ನಾಯಕನಾಗುವ ಹಂಬಲವಿರಬೇಕು, ವಿದ್ಯಾರ್ಥಿಗಳು ಓದಿನ ನಂತರ ಅವರು ಹೊರಹೋಗುತ್ತಾರೆ. ಆದರೆ ನೀವು 20 ವರ್ಷಗಳಿಂದ ಸಂಸ್ಥೆಯಲ್ಲಿದ್ದು, ಸಂಸ್ಥೆಗೆ ನೀವು ಏನು ಕೊಡುಗೆ ನೀಡುತ್ತಿದ್ದೀರಿ? 98 ವಿದ್ಯಾರ್ಥಿಗಳು ನೀವು ನಿರ್ದೇಶಕರಾಗಿರುವುದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದರೆ ನೀವು ಸಂಸ್ಥೆಗೆ ಯಾವ ರೀತಿ ಕೊಡುಗೆ ನಿಡುತ್ತಿದ್ದೀರಿ ಎಂಬುದು ತಿಳಿಯುತ್ತದೆ. ಅವರ ಲೋಪದೋಷಗಳೇನು ಎಂಬುದನ್ನು ಅವಲೋಕಿಸಬೇಕೆಂದು ಕೋರಿದರು. |

| | |
|---|---|
| | ಶ್ರೀ ಮಹದೇಶು ಅವರು ಮಾತನಾಡಿ, ಹಣಕಾಸು ವಿಷಯವಿದ್ದಲ್ಲಿ ತನಿಖೆಯ ಅಗತ್ಯವಿರುತ್ತದೆ. ಸದರಿ ವಿಷಯಕ್ಕೆ ತನಿಖೆಯ ಅಗತ್ಯವಿಲ್ಲ, ಆದ್ದರಿಂದ ಡಾ. ಎಂ. ಮೀರಾ ಅವರನ್ನು ನಿರ್ದೇಶಕರ ಹುದ್ದೆಯಿಂದ ತೆರವುಗೊಳಿಸಿ ಎಂದು ತಿಳಿಸಿದರು.<br><br>ಶ್ರೀ ನಟರಾಜ್ ಹೆಚ್.ಎಸ್ ಅವರು ಮಾತನಾಡಿ, ನಾನು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅರೆಕಾಲಿಕ ಸಂಶೋಧಕರಾಗಿ ಸೇವೆ ಸಲ್ಲಿಸುತ್ತಿದ್ದು, ನಮ್ಮ ವಿಭಾಗದಲ್ಲಿ ಯಾವುದೇ ರೀತಿಯ ಸಮಸ್ಯೆ ತಲೆದೋರಿಲ್ಲವೆಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ, ಯಾವುದೇ ವಿಭಾಗದಲ್ಲೂ ಇಂತಹ ಸಮಸ್ಯೆ ಇಲ್ಲವೆಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ರವರು ಮಾತನಾಡಿ ನೋಟಿಸ್ ಜಾರಿ ಮಾಡಿದ್ದಲ್ಲಿ ಇವರನ್ನು ನಿರ್ದೇಶಕರ ಹುದ್ದೆಯಿಂದ ತೆರವುಗೊಳಿಸಿ ಕ್ರಮಕೈಗೊಂಡಲ್ಲಿ ಬೇರೆ ವಿಭಾಗಗಳಿಗೂ ಇದೊಂದು ಪಾಠವಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.<br><br>ಕುಲಸಚಿವರು ಮಾತನಾಡಿ, ಡಾ. ಎಂ. ಮೀರಾ, ನಿರ್ದೇಶಕರು ಎರಡು ದಿನ ವಿಭಾಗಕ್ಕೆ ಬಂದಿಲ್ಲದ ಸಂದರ್ಭದಲ್ಲಿ, ವಿದ್ಯಾರ್ಥಿಗಳು ಪ್ರೊ. ಎಸ್.ಜೆ. ಮಂಜುನಾಥ್, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗದವರನ್ನು ಅಭಿವೃದ್ಧಿ ಸಂಸ್ಥೆಗೆ ನಿರ್ದೇಶಕರನ್ನಾಗಿ ನಿಯೋಜಿಸುವಂತೆ ಕೋರಿದರು ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಎಲ್ಲಾ ವಿದ್ಯಾರ್ಥಿಗಳು ಸದರಿ ನಿರ್ದೇಶಕರು ಮುಂದುವರೆಯುವುದು ಬೇಡ ಎಂಬ ತೀರ್ಮಾನಕ್ಕೆ ಬಂದಿರುತ್ತಾರೆಂದು ಲಿಖಿತವಾಗಿ ಮನವಿ ಸಲ್ಲಿಸಿರುವುದನ್ನು ಸಭೆಯ ಗಮನಕ್ಕೆ ತಂದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ, ಈಗಾಗಲೇ ಸದರಿ ನಿರ್ದೇಶಕರನ್ನು ಮೂರು–ನಾಲ್ಕು ಬಾರಿ ಕರೆಸಿ, ಅವರಿಗೆ ನೋಟಿಸ್ ಜಾರಿ ಮಾಡಿರುವುದರಿಂದ ಸದರಿ ವಿಷಯವನ್ನು ಮುಕ್ತಾಯಗೊಳಿಸಿ, ಸರಿಯಾದ ಸಮಯಕ್ಕೆ ವಿಭಾಗಕ್ಕೆ ಬರದೇ ಇರುವುದು, ಸರಿಯಾದ ಸಮಯಕ್ಕೆ ಪಾಠ ತೆಗೆದುಕೊಳ್ಳದೇ ಇರುವವರಿಗೆ ಮುಂದಿನವರೆಗೂ ಇದು ಪಾಠವಾಗಬೇಕೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ನಿರ್ದೇಶಕರನ್ನು ಬದಲಾವಣೆ ಮಾಡುವುದಾಗಿ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಅಭಿವೃದ್ಧಿ ಅಧ್ಯಯನ ಸಂಸ್ಥೆಯ ನಿರ್ದೇಶಕರನ್ನಾಗಿ ಯಾವ ಅಧ್ಯಾಪಕರನ್ನು ನೇಮಕ ಮಾಡಬೇಕೆಂದು ಸೂಕ್ತ ಸಲಹೆ ನೀಡಿದ್ದಲ್ಲಿ ಕಾರ್ಯ ಪ್ರವೃತ್ತರಾಗುತ್ತೇವೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಮತ್ತು ಒಳ್ಳೆಯ ಹಿನ್ನೆಲೆ ಇರುವವರನ್ನು ಹಾಗೂ ನಿರ್ದೇಶಕರ ಹುದ್ದೆಯನ್ನು ತುಂಬುವಂತಹ ವ್ಯಕ್ತಿತ್ವವುಳ್ಳವರನ್ನು ನೇಮಕ ಮಾಡಲು ಮಾನ್ಯ ಕುಲಪತಿಗಳ ವಿವೇಚನೆ ಬಿಡಬಹುದು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ಸಂಸ್ಥೆಯಲ್ಲಿ ಹಿರಿಯ ಅಧ್ಯಾಪಕರು ಒಬ್ಬರೇ ಇರುವುದರಿಂದ ಅದೇ ಸಮಸ್ಯೆಗೆ ಕಾರಣವಾಗಿದೆ ಎಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ, ಕೆಲವೊಂದು ವಿಭಾಗಗಳಲ್ಲಿ ಇದೇ ಸಮಸ್ಯೆ ಇದೆ. ಆದ್ದರಿಂದ ಅವರ ಹಿನ್ನೆಲೆ ತಿಳಿದುಕೊಂಡು ಒಳ್ಳೆಯ ಅಧ್ಯಾಪಕರನ್ನು ಗುರುತಿಸಿ ನಿರ್ದೇಶಕರ ಹುದ್ದೆಯನ್ನು ನೀಡಬಹುದು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಪ್ರೊ. ಎಸ್.ಜೆ. ಮಂಜುನಾಥ್, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ ಇವರು ಎಂ.ಬಿ.ಎ.ನಲ್ಲಿ ಅಗ್ರಿಕಲ್ಚರ್ ಬ್ಯುಸಿನೆಸ್ |

| | |
|---|---|
| | ವಿಷಯವನ್ನು ತೆಗೆದುಕೊಳ್ಳುವುದರಿಂದ ಅದು ಅಭಿವೃದ್ಧಿ ಅಧ್ಯಯನ ವಿಭಾಗದ ವಿಷಯಕ್ಕೆ ಸಂಬಂಧಿಸಿರುವುದರಿಂದ ಹಾಗೂ ಇವರ ಹೆಸರನ್ನು ವಿದ್ಯಾರ್ಥಿಗಳೇ ಸೂಚಿಸಿರುವುದರಿಂದ ಪ್ರೊ. ಎಸ್. ಮಂಜುನಾಥ್ ಅವರನ್ನು ನಿರ್ದೇಶಕರನ್ನಾಗಿ ನೇಮಿಸಬಹುದು ಎಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಮಾದೇಶು ಅವರು ಮಾತನಾಡಿ ಸಂಸ್ಥೆಯಲ್ಲಿ ಒಳ್ಳೆಯ ಫಲಿತಾಂಶ ಹಾಗೂ ಅಭಿವೃದ್ಧಿ ಕಾರ್ಯಗಳು ನೆರವೇರಬೇಕಾದಲ್ಲಿ ಒಳ್ಳೆಯವರನ್ನು ನಿರ್ದೇಶಕರನ್ನಾಗಿ ನೇಮಿಸಬಹುದು ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಕೆಸಿಎಸ್‌ಆರ್, ಅಧಿನಿಯಮ ಹಾಗೂ ಸಿಸಿಎ, ಕಾನೂನುಗಳು ಸಂವಿಧಾನದ ಮೂಲದಿಂದ ಬಂದಿದ್ದು, ನಾವು ಸದರಿ ಕಾನೂನುಗಳಿಗೆ ಬದ್ಧರಾಗಿರಬೇಕಾಗಿರುತ್ತದೆ. ಈ ಕಾನೂನುಗಳಿಗೆ ನಾವು ಗೌರವ ಕೊಟ್ಟು, ನಿಗದಿತ ಅವಧಿಯಲ್ಲಿ ಕೇಂದ್ರದಲ್ಲಿ ಇರುವುದಿಲ್ಲ, ಅಧ್ಯಯನ ಸಂಸ್ಥೆಯಲ್ಲಿ ಇರುವುದಿಲ್ಲ ಎಂದರೆ ಅದು ಕರ್ತವ್ಯ ಲೋಪವಾಗುತ್ತದೆ. ಆದ್ದರಿಂದ ಯಾವುದೇ ಅಧ್ಯಾಪಕರುಗಳು ಸಮಸ್ಯೆ ತಂದಾಗ, ಎಲ್ಲಾ ಅಧ್ಯಾಪಕರುಗಳಿಗೆ ನೀವುಗಳು 10 ರಿಂದ 5.30ರವರೆಗೂ ತಮ್ಮ ವಿಭಾಗಗಳಲ್ಲಿ ಇರಿ ಎಂದು ನಾವು ತಿಳಿಸಿರುತ್ತೇವೆಂದು, ಈ ರೀತಿ ವಿಭಾಗದಲ್ಲಿ ಎಲ್ಲರೂ ಇದ್ದಲ್ಲಿ ಅರ್ಧ ಸಮಸ್ಯೆಗಳು ನಿವಾರಣೆಯಾಗುತ್ತದೆ ಎಂದು ತಿಳಿಸಿರುವುದಾಗಿ ಹೇಳಿದರು.<br><br>ಡಾ. ಬಸವರಾಜು ಸಿ, ಅವರು ಮಾತನಾಡಿ ಇದಕ್ಕೆ ಸಂಬಂಧಪಟ್ಟ ಹಾಗೆ ಏನಾದರೂ ಸುತ್ತೋಲೆ ಹೊರಡಿಸಿರುವಿರಾ ಎಂದು ಪ್ರಶ್ನಿಸಿದರು.<br><br>ಕುಲಸಚಿವರು ಸುತ್ತೋಲೆಯನ್ನು ಈಗಾಗಲೇ ವಿಭಾಗಗಳಿಗೆ ಹೊರಡಿಸಲಾಗಿದೆ ಹಾಗೂ ಮೌಖಿಕವಾಗಿ ಸೂಚಿಸಲಾಗಿದೆಯೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಕಳೆದ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅಗ್ರಿಬ್ಯುಸಿನೆಸ್ ವಿಷಯವು ರೆಕಗನೈಸ್ ಆಗಿಲ್ಲವೆಂದು ತಿಳಿಸಿದ್ದೀರಿ, ಅದು ರೆಕಗನೈಸ್ ಆಗಿದೆಯೇ ಎಂದು ಕೇಳಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಆ ವಿಷಯವನ್ನು ಈ ಬಾರಿಯಿಂದ ತೆಗೆದುಕೊಳ್ಳುವುದಾಗಿ ತಿಳಿಸಿದರು. ಈಗಾಗಲೇ ಪ್ರವೇಶಾತಿಯು ನಡೆದಿದೆ. ನಾನು ಬಂದಾಗಿನಿಂದ ಹೇಳುತ್ತಿರುವುದು ಮಾನ್ಯತೆ ಪಡೆದಿರುವ ಕೋರ್ಸ್‌ಗಳನ್ನು ಮಾತ್ರ ಮುಂದುವರಿಸಿ ಎಂದು ಆದರೆ ಕೆಲವರು ತಮ್ಮ ಉದಾಸೀನ ಪ್ರವೃತ್ತಿಯಿಂದಾಗಿ ಮಾನ್ಯತೆ ಪಡೆಯದಿರುವ ವಿಷಯಗಳಿಗೆ ಪ್ರವೇಶಾತಿ ನೀಡುತ್ತಿದ್ದಾರೆ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಎಂಬಿಎ ಅಥವಾ ವಾಣಿಜ್ಯ ಅಧ್ಯಯನ ವಿಭಾಗಕ್ಕೆ ಅಗ್ರಿಬ್ಯುಸಿನೆಸ್ ವಿಷಯವನ್ನು ಸೇರ್ಪಡೆಗೊಳಿಸಿದರೆ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್ ಪಡೆಯಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಎಐಸಿಟಿಇ ಯಿಂದ ಅನುಮೋದನೆ ಪಡೆದಂತಹ ವಿಷಯಗಳನ್ನು ಮಾತ್ರ ನಾವು ನಡೆಸಲು ಅವಕಾಶವಿದೆ. ಆದ್ದರಿಂದ ಅಗ್ರಿಬ್ಯುಸಿನೆಸ್ ವಿಷಯವನ್ನು ಬೇರೆ ವಿಭಾಗಗಳಿಗೆ ಸೇರ್ಪಡೆಗೊಳಿಸಲು ಅವಕಾಶವಿಲ್ಲ ಎಂದು ತಿಳಿಸಿದರು. ಎಂ.ಬಿ.ಎ. ಇನ್ ಅಗ್ರಿಬ್ಯುಸಿನೆಸ್ ವಿಷಯಕ್ಕೆ ಮಾನ್ಯತೆಯನ್ನು ಎಐಸಿಟಿಇಯಿಂದ ಪಡೆಯಲು ಪ್ರಯತ್ನಿಸುವುದಾಗಿ ತಿಳಿಸಿದರು. |
| **ತೀರ್ಮಾನ** | ಡಾ. ಎಂ. ಮೀರಾ, ನಿರ್ದೇಶಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು ನಿರ್ದೇಶಕರ ಹುದ್ದೆಯಿಂದ ತೆರವುಗೊಳಿಸಿ ಪ್ರೊ. ಎಸ್.ಜೆ. |

| | |
|---|---|
| | ಮಂಜುನಾಥ್, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಪ್ರಭಾರ ನಿರ್ದೇಶಕರನ್ನಾಗಿ ನೇಮಕ ಮಾಡಲು ಸಭೆಯು ತೀರ್ಮಾನಿಸಿತು. ಹಾಗೂ ಡಾ. ಮೀರಾ ಇವರಿಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಶೈಕ್ಷಣಿಕ ವಾತವರಣಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುವಂತೆ ಎಚ್ಚರಿಕೆ ನೋಟೀಸ್ ನೀಡಲು ತೀರ್ಮಾನಿಸಿತು. |

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಸಿಂಡಿಕೇಟ್ ಸದಸ್ಯರುಗಳಿಗೆ ಕುಲಸಚಿವರು ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ**

**ಕುಲಪತಿಗಳು ಮತ್ತು ಅಧ್ಯಕ್ಷರು**